ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು
E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಿಯು/ಶೈಶಾ/ಎನ್.ಸಿ.ಇ.ಆರ್.ಟಿ-ಪ.ಪು/2016-17 ದಿನಾಂಕ:15-04-2017.

# ಪ್ರಕಟಣೆ

**ವಿಷಯ:**- ಎನ್.ಸಿ.ಇ.ಆರ್.ಟಿ. ಪ್ರಕಟಿತ ಪಠ್ಯಪುಸ್ತಕಗಳ ಮಾರಾಟ ಕೈಗೊಳ್ಳಲು ನೋಂದಣಿಗಾಗಿ ಅರ್ಜಿಯನ್ನು ಆಹ್ವಾನಿಸುತ್ತಿರುವ ಬಗ್ಗೆ.

**ಉಲ್ಲೇಖ:**- ದಿನಾಂಕ:13-04-2017ರಂದು ಎನ್.ಸಿ.ಇ.ಆರ್.ಟಿ. ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡಾವಳಿ.

-*-

ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಂತದಲ್ಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ಎನ್.ಸಿ.ಇ.ಆರ.ಟಿ. ಪಠ್ಯಪುಸ್ತಕಗಳನ್ನು 2017-18ನೇ ಸಾಲಿನಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.

| | | |
|---|---|---|
| 01 | **ಪ್ರಥಮ ಪಿಯುಸಿ** | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ, ಲೆಕ್ಕಶಾಸ್ತ್ರ, ಅರ್ಥಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನ |
| 02 | **ದ್ವಿತೀಯ ಪಿಯುಸಿ** | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ |

ಈ ಮೇಲ್ಕಂಡ ಎನ್.ಸಿ.ಇ.ಆರ್.ಟಿ. ಪ್ರಕಟಿತ ಪಠ್ಯಪುಸ್ತಕಗಳನ್ನು ರಾಜ್ಯದಲ್ಲಿ ಪಿಯುಸಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಲು ಆಸಕ್ತ ಪುಸ್ತಕ ಮಾರಾಟಗಾರರಿಂದ ಅರ್ಜಿ ಆಹ್ವಾನಿಸಿದೆ. ಇಚ್ಛೆಯಿರುವ ಅಧಿಕೃತ ಮಾರಾಟಗಾರರು ಪದವಿ ಪೂರ್ವ ಶಿಕ್ಷಣ ಇಲಾಖೆಯೊಂದಿಗೆ ನೋಂದಣಿ ಮಾಡಿಸಿಕೊಳ್ಳಲು ಈ ಕೆಳಕಂಡ ಷರತ್ತುಗಳೊಂದಿಗೆ ಅರ್ಜಿ ಆಹ್ವಾನಿಸಿದೆಃ

1. ನೋಂದಣಿಯ ಅವಧಿಯು 2017-18ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಆಗಸ್ಟ್ 31, 2017ರ ವರೆಗೆ ಇರುತ್ತದೆ. ತದನಂತರ ನೋಂದಣಿ ತಾನಾಗಿಯೇ ರದ್ದಾಗುತ್ತದೆ.
2. ಅರ್ಜಿಯೊಂದಿಗೆ ರೂ.500/- ಮೊತ್ತದ ಡಿ.ಡಿ.ಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹೆಸರಿಗೆ ನೋಂದಣಿ ಶುಲ್ಕವಾಗಿ ಪಾವತಿಸತಕ್ಕದ್ದು.
3. ಕನಿಷ್ಠ 2000 ಪಠ್ಯಪುಸ್ತಕಗಳನ್ನು ಎತ್ತುವಳಿ ಮಾಡತಕ್ಕದ್ದು.
4. ಅರ್ಜಿ ನಮೂನೆಯು ಈ ಜ್ಞಾಪನದೊಂದಿಗೆ ಲಗತ್ತಿಸಿದೆ.
5. ಎನ್.ಸಿ.ಇ.ಆರ್.ಟಿ. ಯಿಂದ ಪಠ್ಯಪುಸ್ತಕದ ಬೆಲೆಯ ಶೇ.20ರಷ್ಟು ರಿಯಾಯಿತಿ ಸೌಲಭ್ಯವಿರುತ್ತದೆ.
6. ಶೇ.15ರಷ್ಟು ರಿಯಾಯಿತಿಯನ್ನು ರೀಟೇಲ್ ಮಾರಾಟಗಾರರಿಗೆ ನೀಡಬಹುದಾಗಿರುತ್ತದೆ.
7. ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಎನ್.ಸಿ.ಇ.ಆರ್.ಟಿ.ಗೆ ಕಳುಹಿಸಲಾಗುತ್ತದೆ.
8. ನೋಂದಾಯಿತ ಮಾರಾಟಗಾರರಿಗೆ ಪಠ್ಯಪುಸ್ತಗಳನ್ನು ಪೂರೈಸುವ ಅಥವಾ ಪೂರೈಸದಿರುವ ಹಕ್ಕನ್ನು ಎನ್.ಸಿ.ಇ.ಆರ್.ಟಿ.ಯು ಹೊಂದಿರುತ್ತದೆ.
9. ನೋಂದಾಯಿತ ಮಾರಾಟಗಾರರು ಪಠ್ಯಪುಸ್ತಕಗಳನ್ನು ಎನ್.ಸಿ.ಇ.ಆರ್.ಟಿ. ಬೆಂಗಳೂರು, ರವರ ಉಗ್ರಾಣದಿಂದ ಹಣದ ಪೂರ್ವಪಾವತಿಯ ಷರತ್ತಿನ ಮೇರೆಗೆ ಎತ್ತುವಳಿ ಮಾಡತಕ್ಕದ್ದು.
10. ಅರ್ಜಿಗಳನ್ನು ದಿನಾಂಕ:24-04-2017ರ ಸಂಜೆ 5-30ರೊಳಗಾಗಿ ಜಂಟಿ ನಿರ್ದೇಶಕರು(ಶೈಕ್ಷಣಿಕ), ಕೊಠಡಿ ಸಂಖ್ಯೆ:9, ನೆಲ ಮಹಡಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು, ಇಲ್ಲಿಗೆ ಸಲ್ಲಿಸತಕ್ಕದ್ದು. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,

# ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳ ಮಾರಾಟದ ನೋಂದಣಿಗಾಗಿ ಅರ್ಜಿ ನಮೂನೆ

| | | |
|---|---|---|
| 1 | ಪಠ್ಯಪುಸ್ತಕ ಮಾರಾಟಗಾರರ ಹೆಸರು ಮತ್ತು ವಿಳಾಸ | |
| 2 | ಪಠ್ಯಪುಸ್ತಕ ಮಾರಾಟಗಾರರ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸ | |
| 3 | ಪಠ್ಯಪುಸ್ತಕಗಳ ಅಧಿಕೃತ ಮಾರಾಟಗಾರರೇ? | |
| 4 | ವಹಿವಾಟು (ಟ್ರೇಡ್)ಲೈಸೆನ್ಸ್ ಸಂಖ್ಯೆ | |
| 5 | ಪಠ್ಯಪುಸ್ತಕ ಮಾರಾಟದ ವ್ಯಾಪ್ತಿ ಪ್ರದೇಶ | ಹೌದು/ಇಲ್ಲ |
| 6 | ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳ ಅಧಿಕೃತ ಮಾರಾಟಗಾರರೇ? | ಹೌದು/ಇಲ್ಲ |
| 7 | ಈ ಹಿಂದೆ ಪದವಿ ಪೂರ್ವ ಹಂತದ ಪಠ್ಯಪುಸ್ತಕಗಳ ಮಾರಾಟ ಮಾಡಿದ ಅನುಭವವಿದೆಯೇ? | |
| 8 | ಎಷ್ಟು ವರ್ಷದ ಅನುಭವವಿದೆ(ವರ್ಷಗಳಲ್ಲಿ) | |

## ಘೋಷಣೆ

ಮೇಲಿನ ಎಲ್ಲಾ ಮಾಹಿತಿಗಳು ಸತ್ಯವೆಂದು ದೃಢೀಕರಿಸುತ್ತೇನೆ. ಈ ಅರ್ಜಿಯೊಂದಿಗೆ ರೂ.500/-ರ ಡಿ.ಡಿ.ಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಹೆಸರಿನಲ್ಲಿ ----------------------ಬ್ಯಾಂಕ್, ಡಿ.ಡಿ. ಸಂಖ್ಯೆ -------------------------, ದಿನಾಂಕ:- -------------------ಅನ್ನು ಲಗತ್ತಿಸಿರುತ್ತೇನೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಕಟಣೆ ಸಂಖ್ಯೆ:ಪಿಯು/ಶೈಶಾ/ಎನ್.ಸಿ.ಇ.ಆರ್.ಟಿ-ಪ.ಪು/2016-17, ದಿನಾಂಕ:15-04-2017ರಲ್ಲಿರುವ ಎಲ್ಲಾ ಷರತ್ತುಗಳನ್ನು ಒಪ್ಪುತ್ತೇನೆಂದು ಪ್ರಮಾಣಿಸುತ್ತೇನೆ.

ಪುಸ್ತಕ ಮಾರಾಟಗಾರರ ಸಹಿ ಮೊಹರಿನೊಂದಿಗೆ.